**ಇಂದು ದಿನಾಂಕ:02.04.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಆರ್.ಎಸ್ ವಕೀಲರಿಂದಃ**

I have running a pub on lease and also running a ready made door selling shop. ಪ್ರತಿವಾದಿ ಊರಿನಲ್ಲಿರುವ ಪಾಲಾಕ್ಷ ಎಂಬುವರು ದಾವಾ ಆಸ್ತಿ ಮಾರಾಟಕ್ಕಿರುವ ಬಗ್ಗೆ ನನಗೆ ತಿಳಿಸಿದ್ದರು. ದಾವಾ ಆಸ್ತಿಗೆ ಸಂಬಂಧಿಸಿದಂತೆ ಆರ್ ಟಿ ಸಿ ಮಾತ್ರ ನೋಡಿದ್ದೇನೆ. 1 ನೇ ಪ್ರತಿವಾದಿಗೆ ಇಬ್ಬರು ಪತ್ನಿಯರು ಎಂದರೆ ಗೊತ್ತಿಲ್ಲ. ಪ್ರತಿವಾದಿಯ ವಂಶವೃಕ್ಷವನ್ನು ನಾನು ವಿಚಾರಿಸಿರಲಿಲ್ಲ. ವಂಶವೃಕ್ಷವನ್ನು ಪಡೆದುಕೊಳ್ಳಲು ತೊಂದರೆ ಇರಲಿಲ್ಲ. ಕ್ರಯದ ಕರಾರು ಪತ್ರವನ್ನು ಬೆಟ್ಟದಪುರ ಸಬ್ ರಿಜಿಸ್ಟರ್ ಕಚೇರಿಯಲ್ಲಿ ನೊಂದಣಿ ಮಾಡಿಸಿದ್ದೇವೆ. ಕ್ರಯದ ಕರಾರು ಪತ್ರಕ್ಕೆ ಪಾಲಾಕ್ಷ ಮತ್ತು ಮಹಮ್ಮದ್ ರುಕ್ಸಾರ್ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ. ದಾವಾ ಆಸ್ತಿಯ ಮೇಲೆ 1 ನೇ ಪ್ರತಿವಾದಿಯ ಮೊದಲನೆಯ ಹೆಂಡತಿಯ ಮಕ್ಕಳು ಪಿರಿಯಾಪಟ್ಟಣದ ಕಿರಿಯ ಶ್ರೇಣಿಯ ನ್ಯಾಯಾಲಯದಲ್ಲಿ ಎಫ್.ಡಿ.ಪಿ. 11/2015 ರಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ನಿ.ಪಿ–1 ನ್ನು ಸಂದೀಪ ಎಂಬುವರು ಬರೆದಿದ್ದಾರೆ. ಹಾರನಹಳ್ಳಿ ಹೋಬಳಿ, ಬಿಳಗುಂದ ಗ್ರಾಮದ ಸ.ನಂ.70 ಕ್ಕೆ ಕ್ರಯದ ಕರಾರು ಆಗಿದೆ. ಕ್ರಯ ಕರಾರಿನಲ್ಲಿ ನಮೂದಿಸಲಾದಂತೆ 1 ವರ್ಷ 2 ತಿಂಗಳ ನಂತರ ಕ್ರಯ ಪತ್ರ ನೊಂದಣಿ ಮಾಡಿಕೊಡುವಂತೆ ಪ್ರತಿವಾದಿಯನ್ನು ಕೇಳಿದ್ದೇವೆ. ಆ ಸಮಯದಲ್ಲಿ ವಕೀಲರಿಂದ ನೋಟೀಸು ಕಳುಹಿಸಿಲ್ಲ. ದಿನಾಂಕ 18.10.2021 ರಂದು ಪ್ರತಿವಾದಿಗೆ ನೋಟೀಸು ಕಳುಹಿಸಿದ್ದೇವೆ. ಪ್ರತಿವಾದಿ ಕ್ರಯದ ಕರಾರ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿ. ಪ್ರತಿವಾದಿಗಳು ನನ್ನಿಂದ ರೂ.7,00,000/– ಸಾಲ ಪಡೆದುಕೊಂಡಿದ್ದರು ಅದಕ್ಕಾಗಿ ಸಾಲದ ಆಧಾರಕ್ಕಾಗಿ ಕರಾರ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿಗಳು ಈಗಲೂ ಸಹ ಹಣ ಹಿಂದಿರುಗಿಸಲು ಸಿದ್ಧರಾಗಿದ್ದಾರೆ ಎಂದರೆ ನಾನು ಹಣ ಕೊಟ್ಟು 8 ವರ್ಷ ಆಗಿದೆ. ಬಿಳಗುಂದ ಗ್ರಾಮದಲ್ಲಿ 1 ಎಕರೆಗೆ 20,00,000/– ಬೆಲೆ ಬಾಳುತ್ತದೆ ಎಂದರೆ ಗೊತ್ತಿಲ್ಲ. ಸಾಲದ ಹಣಕ್ಕಾಗಿ ಪತ್ರ

ವ್ಯವಹಾರ ಆಗಿದ್ದರೂ ಸಹ ಮಾರಾಟದ ಕರಾರು ಪತ್ರ ಆಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**